ಪದಬಂಧ

# ಪ್ರಶ್ನಾಂಕಣ

## ಪಾರದರ್ಶಕ ಪ್ರಾಣಿಗಳು ಇವೆಯೇ?


ಹೌದು, ಇವೆ; ಸಾವಿರಾರು ಸಂಖ್ಯೆಯಲ್ಲಿವೆ. ವಿಶೇಷ ಏನೆಂದರೆ ಅಂಥ ಪ್ರಾಣಿ ಪ್ರಭೇದಗಳ ಬಹುಪಾಲು ಎಲ್ಲವೂ ಜಲಾವಾರಗಳಲ್ಲಿ– ಅದರಲ್ಲೂ ಪ್ರಮುಖವಾಗಿ ಕಡಲಿನಲ್ಲಿ– ನೆಲಸಿವೆ. ಪಾರದರ್ಶಕ ಶರೀರದ ಎಂದರೆ 'ನೀರಿನದೇ ಬಣ್ಣ'ದ ಅಂಥವೆಲ್ಲ ಪ್ರಾಣಿಗಳೂ ಕಡಲಲ್ಲಿ ಅಗೋಚರ; ಅವುಗಳ ಜೀರ್ಣಾಂಗದಲ್ಲಿನ ಆಹಾರದಿಂದ ಅಥವಾ ಅವುಗಳ ದೇಹದ ಮೇಲಿನ ವಿರಳ ವಿಶಿಷ್ಟ ವರ್ಣಯುಕ್ತ ಚುಕ್ಕಿ–ಚಿತ್ತಾರಗಳಿಂದಷ್ಟೇ ಅವು ಅಲ್ಪಸ್ವಲ್ಪ ಗೋಚರ (ಚಿತ್ರ ನೋಡಿ) ಹೆಬ್ಬೆಟ್ಟಿನಷ್ಟೇ ಗಾತ್ರದಿಂದ ಕಾಲ್ಚೆಂಡಿನ ಗಾತ್ರದವರೆಗೆ ಅವುಗಳದು ಬಹು ವಿಧ, ಚಿತ್ರ ವಿಚಿತ್ರ ಆಕಾರ ವೈವಿಧ್ಯ.

ವಿಸ್ಮಯ ಏನೆಂದರೆ ಇಂತಹ ಯಾವ ಪ್ರಾಣಿಗೂ ಹಲ್ಲುಗಳಿಲ್ಲ, ವಿಷದ ಅಂಗಗಳಿಲ್ಲ, ವೇಗಗಾಮಿತ್ವವೂ ಇಲ್ಲ. ಹಾಗಾಗಿ ಬೇಟೆಗಾರ ಪ್ರಾಣಿಗಳ ವಿರುದ್ಧ ಯಾವುದೇ ಬಗೆಯ ಆತ್ಮರಕ್ಷಣಾ ಸಾಮರ್ಥ್ಯವೂ ಇಲ್ಲದ ಇಂಥ ಪ್ರಾಣಿಗಳಿಗೆ ಅದಕ್ಕಾಗಿಯೇ ಪ್ರಕೃತಿ ನೀರಲ್ಲಿ ಅಗೋಚರವಾಗುವ ಪಾರದರ್ಶಕ ಶರೀರವನ್ನು ಒದಗಿಸಿದೆ.

ಆದರೆ ಪ್ರಾಣಿಯೊಂದರ ಪೂರ್ಣ ಶರೀರವನ್ನು ಗಾಜಿನಂತೆ ಪಾರಕವಾಗಿಸುವುದು ಸುಲಭದ ಕೆಲಸವಲ್ಲ. ಆದ್ದರಿಂದಲೇ ಈ ಬಗೆಯ ಪ್ರಾಣಿಗಳನ್ನು ಸೃಷ್ಟಿಸುವಲ್ಲಿ ಪ್ರಕೃತಿ ಕೆಲವಾರು ಅನನ್ಯ ತಂತ್ರಗಳನ್ನು ಬಳಸಿದೆ. ಪ್ರಮುಖವಾಗಿ–


* ಈ ವರ್ಗದ ಪ್ರಾಣಿಗಳ ಶರೀರ ಜಿಲೆಟಿನ್‌ನಂಥ ದ್ರವ್ಯದಿಂದ ರೂಪುಗೊಂಡಿದೆ. ಈ ದ್ರವ್ಯ ಸಂಪೂರ್ಣ ಪಾರದರ್ಶಕ. ಅಷ್ಟೇ ಅಲ್ಲ ಈ ದ್ರವ್ಯದ ಉತ್ಪಾದನೆ ಸುಲಭ; ಈ ದ್ರವ್ಯ ತುಂಬ ಹಗುರ ಕೂಡ. ಹಾಗಾಗಿ ಇಂಥ ಜೀವಿಗಳದು ಶ್ರಮರಹಿತ ಈಜಾಟ; ಆಹಾರದ ಅಗತ್ಯವೂ ತುಂಬ ಕಡಿಮೆ.

* ಪಾರದರ್ಶಕತೆಯನ್ನು ಪರಿಪೂರ್ಣವಾಗಿ ಪ್ರಾಪ್ತವಾಗಿಸಲೆಂದು ಇಂತಹ ಪ್ರಾಣಿಗಳು ತೆಳ್ಳನೆಯ ಶರೀರ ಹೊಂದಿವೆ. ಜೀರ್ಣಾಂಗದಲ್ಲಿ ಸಂಗ್ರಹವಾಗುವ ಆಹಾರ ಅಪಾರದರ್ಶಕವಾದ್ದರಿಂದ ಈ ಗುಂಪಿನ ಪ್ರಾಣಿಗಳ 'ಜಠರ' ಉದ್ದವಾಗಿ ಸೂಚಿಯಂಥ ಕೊಳವೆ ರೂಪದಲ್ಲಿ ವಿನ್ಯಾಸಗೊಂಡಿದೆ. ಅಪಾರಕವಾಗಿರಲೇಬೇಕಾದ 'ಅಕ್ಷಿ ಪಟ'ಗಳು ಕೇವಲ ಚುಕ್ಕಿಗಾತ್ರದವಾಗಿವೆ.



* ಶರೀರದ ಚರ್ಮ ಕಿಂಚಿತ್ತಾದರೂ ಬೆಳಕನ್ನು ಪ್ರತಿಫಲಿಸುತ್ತದೆ. ಆದ್ದರಿಂದ ಕನಿಷ್ಟ ಚರ್ಮದುಡುಗೆ ಸಾಕಾಗುವಂತಹ ವಿನ್ಯಾಸಗಳ ಶರೀರಗಳನ್ನೇ ಈ ಪ್ರಾಣಿಗಳು ಪಡೆದಿವೆ.

ಎಂಥ ಸೃಷ್ಟಿ! ಎಷ್ಟು ಸೋಜಿಗ!



ಎಡದಿಂದ ಬಲಕ್ಕೆ:

1. ಆಸ್ತಿ ಇರುತ್ತದಾದರೂ ಅದರ ಮೌಲ್ಯ ನಿಶ್ಚಿತವಲ್ಲ (4)
3. ಸಂಕಟದ ಜೊತೆಗೆ ತೊಂದರೆಯೂ ಬೆರೆತರೆ? (3)
4. ಪಟ್ಟಿಯ ಎಲ್ಲವೂ ಸ್ಥಾನಾಂತರಗೊಂಡಿವೆ (3)
6. ಹೊತ್ತು ಮೀರದಂತೆ ಸ್ವಲ್ಪವೇ ಊಟ (4)
7. ಒರೆಸಿಟ್ಟ ವಸ್ತುಗಳಷ್ಟಕ್ಕೂ ಆತನದೇ ಸ್ವಾಮ್ಯ (3)
9. ಆ ಹುಲ್ಲು ಹಾಸು, ಎಷ್ಟು ಸೊಂಪಾಗಿದೆ ನೋಡಿ (3)
11. ಬಕರನಾದರೂ ಮಹಾನ್ ದೈವ ಭಕ್ತನ ಹೆಸರು (3)
13. ತೇರಿಗೆ ಕಟ್ಟಲೆಂದು ಎಂಥ ಕುದುರೆ! (3)
15. ಹೆದರಿಸಲಾಗದು ಬಿಡಿ. ಆತ 'ವಿಷ್ಣುವಿನ ಸೇವಕ' (4)
17. ಸ್ನೇಹ ತೋರಿಸಲೆಂದು ಈ ಒಳ್ಳೆಯ ನಗು (3)
18. ಮಂಗನ ಕಣ್ಣಲ್ಲಿ ಎಂಥ ಹೊಳಪು! (3)
19. ನೋಡಿದಿರಾ ಮತ್ತೆ? ಕಡಲಿನ ರತ್ನದಂತಹ ಮಾತು (4)

ಮೇಲಿಂದ ಕೆಳಕ್ಕೆ:

1. ಅಷ್ಟೆಲ್ಲ ಮಿಗಿಸಿದ್ದು ಪಕ್ಷದ ಎಂಟನೆಯ ದಿನ (3)
2. ಪರಿಸಪಿಸಿದ್ದೂ ತಿಳಿಯದಷ್ಟು ಪೆದ್ದ (3)
3. ಹಂಸಕ್ಷೀರ ನ್ಯಾಯದ ಕೊಲೆ (3)
5. ಟೋಪಿಯನ್ನು ತಲುಪಿಸಲು ಅಂಚೆಯೇ? (3)
7. ಅದು ಉಸ್ತುವಾರಿಯ ಕೆಲಸ ಎಂಬುದು ನೈಜ ವಿಚಾರ (4)
8. ಅರಮನೆಯ ಕೂಸು ಎಂಬಷ್ಟು ಕೋಮಲ ಹುಡುಗ (4)
9. ಹೊಸದಾಗಿ ಹೇಳಿದ್ದಾದರೂ ಸುಳ್ಳು ನುಡಿ (4)
10. ಸುಂದರಾಂಗನದು ದೇವತೆಗಳೊಡನೆ ಸ್ನೇಹ (4)
12. ಕಬಳಿಸುವುದೇಕೆ? ಕೆಳಕ್ಕೆ ಹಾಕು (3)
15. ಹೊಸದನ್ನು ಕೊಳ್ಳುವಾಗ ಉತ್ತಮ ಗುಣಮಟ್ಟದ್ದೂ ಆಗಿರಲಿ (3)
16. ಸುತ್ತ ಮುತ್ತ ಹುಡುಕಿ ಹೋಮಕ್ಕೆ ಅರಳೀ ಕಡ್ಡಿ (3)
14. ಗಾರುಡಿಗನ ಬಟ್ಟೆಮನೆಯೇ ತಲೆ ಕೆಳಗು (3)

ಎನ್. ವಾಸುದೇವ್

### ಪದಬಂಧ 10–10–2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ವಿನಾಯಕ; 3. ವಾರಿಧಿ; 4. ದರ್ಶನ; 6. ಸುಖಾಸನ; 7. ಬವರ; 9. ನಸುಕು; 11. ದಶಕ; 13. ತೆಪರ; 15. ನೌಕಾಸೇನೆ; 17. ಯುವಕ; 18. ಗೆಳತಿ; 19. ರಮಾಸುತ.

ಮೇಲಿಂದ ಕೆಳಕ್ಕೆ:

1. ವಿಧಿಸು; 2. ಕದನ; 3. ವಾಸ್ತವ; 5. ನಮಿಸು; 7. ಬಲ್ಲಿದ; 8. ರಸಿಕ; 9. ನಮ್ರತೆ; 10. ಕುವರ; 12. ಶತಾಯು; 14. ಪದ್ಧತಿ; 15. ನೌಕರ; 16. ನೆಗೆತ.